ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 13.06.2024.

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ.ಎನ್.ಟಿ. ವಕೀಲರಿಂದಃ</u>**

1 ನೇ ಪ್ರತಿವಾದಿ ದಾವಾ ಸ್ವತ್ತು 272/2 ರ 6 ಎಕರೆ 25 ಗುಂಟೆ ಮಾಲಿಕರು ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಗಂಡನ ಆರೋಗ್ಯ ಸಲುವಾಗಿ ಹಾಗೂ ಕುಟುಂಬದ ಅಡೆಚಣೆ ತಿರಿಸುವ ಸಲುವಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡಲು ತೆಗೆದಿದ್ದರು ಎಂದರೆ, ಸಾಕ್ಷಿ ಮಾರಾಟ ಮಾಡುವುದು ಎಂದು ಮಾತ್ರ ಹೇಳಿದ್ದರು, ಆದರೆ ಕುಟುಂಬದ ಅಡೆಚಣೆ ಬಗ್ಗೆ ಹೇಳಿದ್ದಿಲ್ಲ. 2 ನೇ ಪ್ರತಿವಾದಿ ಮತ್ತು ನನ್ನ ಮದ್ಯ ಒಳ್ಳೆಯ ಗೆಳೆತನ ಇತ್ತು ಎಂದರೆ ಸರಿ. ನನ್ನ ಹಾಗೂ 1 ನೇ ಪ್ರತಿವಾದಿ ಮದ್ಯ ನಿಪಿ-3 ರ ವ್ಯವಹಾರ, 2 ನೇ ಪ್ರತಿವಾದಿಯಿಂದಲೇ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುನ್ನು ಸುಮಾರು ರೂ.25 ಲಕ್ಷಕ್ಕೆ ಮಾರಾಟ ಮಾಡಲು, 2 ನೇ ಪ್ರತಿವಾದಿ ಮಾತುಕತೆ ಮಾಡಿದ್ದರು ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿ ಇಬ್ಬರು ಕೂಡಿಯೇ ಮಾರಾಟ ಮಾಡಲು ಒಪ್ಪಿದ್ದರು ಎಂದು ನುಡಿಯುತ್ತಾರೆ.

ನಿಪಿ-3 ರ ವ್ಯವಹಾರ ಮಾಡುವ ಕಾಲಕ್ಕೆ 2 ನೇ ಪ್ರತಿವಾದಿ, ಅವರ ಗಂಡ, ಅವರ ಮಗ ಹಾಗೂ 2 ನೇ ಪ್ರತಿವಾದಿ, ಶಿವರಾಜ ಪೂಜಾರಿ ರವರು ಇದ್ದರು. 2 ನೇ ಪ್ರತಿವಾದಿ ಹೇಳಿದ ಹಾಗೇ ವ್ಯವಹಾರ ಮುಗಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ದಾವಾ ಸ್ವತ್ತುನ್ನು ಕೊಡಿಸಿಕೊಡಲು ಮದ್ಯಸ್ತಗಾರರು ಆಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಮೇಲೆ ವಿಶ್ವಾಸವಿಟ್ಟು ನನ್ನ ಜೊತೆ ವ್ಯವಹಾರ ಮಾಡಿಕೊಂಡಿರುತ್ತಾರೆ ಎಂದರೆ ಇರಬಹುದು. ನಿಪಿ-3 ರ ದಾಖಲೆಯನ್ನು ನಾನೇ ತಯಾರಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ

ಪ್ರತಿವಾದಿ, ಅವರ ಗಂಡ ಮತ್ತು ಅವರ ಮಗ ಹಾಗೂ 2 ನೇ ಪ್ರತಿವಾದಿ ಎಲ್ಲರು ಕೂಡಿ ತಯಾರಿಸಿಕೊಂಡಿತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-3 ರ ದಾಖಲೆಯನ್ನು ಲೇನಿನ್ ಎಂಬ ವಕೀಲರಿಂದ ತಯಾರಿಸಿಕೊಂಡಿರುತ್ತೇವೆ.

ದಾವಾ ಸ್ವತ್ತಿನ ಮಾತುಕತೆ ದಿಃ 21.04.2021 ರಂದು ಆಗಿರುತ್ತದೆ ಎಂದರೆ ಸರಿ. ನಿಪಿ-3 ನ್ನು ದಿಃ 22.04.2021 ರಂದು ತಯಾರಿಸಿರುತ್ತೇವೆ ಎಂದರೆ ಸರಿ. ನಾನು ನಿಪಿ-3 ರ ಮುಂಗಡ ಹಣ ರೂ.5 ಲಕ್ಷ ವನ್ನು 2 ನೇ ಪ್ರತಿವಾದಿ ಕೈಯಲ್ಲಿ ಕೊಟ್ಟಿರುತ್ತೇನೆ ಎಂದರೆ, ಸಾಕ್ಷಿ 1 ನೇ ಪ್ರತಿವಾದಿ ಕೈಯಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಖರೀದಿ ಪತ್ರವನ್ನು 3 ತಿಂಗಳ ಒಳಗಾಗಿ ಮಾಡಿಕೊಳ್ಳಬೇಕೆಂದು ಕರಾರು ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ, ನನ್ನ ಹಾಗೂ 2 ನೇ ಪ್ರತಿವಾದಿಯ ಮೇಲೆ ವಿಶ್ವಾಸವಿಟ್ಟು ನಿಪಿ-3 ರ ದಾಖಲೆಗೆ ಹೆಬ್ಬಟ್ಟಿನ ಸಹಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ವಕೀಲರು ಓದಿ ಹೇಳಿದ ನಂತರ ಸಹಿ ಮತ್ತು ಹೆಬ್ಬಟ್ಟಿನ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-3 ರ ದಾಖಲೆಯನ್ನು ಅದೇ ದಿನ ನೋಟರಿ ರವರಿಂದ ದೃಢಿಕರಿಸಿಕೊಂಡಿರುತ್ತೇವೆ. ನೋಟರಿಯಾದ ನಂತರ ನಿಪಿ-3 ರ ದಾಖಲೆಯ ಪ್ರತಿಯನ್ನು ಕೊಡಬೇಕೆಂದು, 1 ನೇ ಪ್ರತಿವಾದಿ ಕೇಳಿಕೊಂಡರೂ ಕೂಡಾ ನಾನು ಅದರ ಪ್ರತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ನಮೂನೆ-10 ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಗಂಡನ ಪ್ಯಾರೇಲೆಸಸ್ ಮತ್ತು ಮದುಮೇಹ ಖಾಯಿಲೆ ಸಲುವಾಗಿ ದಾವಾ ಸ್ವತ್ತುನ್ನು ನನ್ನ ಮಾರಾಟ ಮಾಡಲು ತೆಗೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು

ಮತ್ತು 2 ನೇ ಪ್ರತಿವಾದಿ, 1 ನೇ ಪ್ರತಿವಾದಿ ಗಂಡ ಆಸ್ಪತ್ರೆಗೆ ದಾಖಲಾದಾಗ ಹೈದ್ರಾಬಾದ್ ಆಸ್ಪತ್ರೆಗೆ ಹೋಗಿ ಬಂದಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಅಂತಹ ಪರಿಸ್ಥಿತಿಯನ್ನು ನಾವು ನೋಡಿಕೊಂಡು ನಾನು 3 ತಿಂಗಳ ಒಳಗಾಗಿ ನೋಂದ ಕ್ರಯ ಪತ್ರವನ್ನು ಮಾಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಕರಾರಿನ ಪ್ರಕಾರ 3 ತಿಂಗಳ ಒಳಗಾಗಿ ನೋಂದ ಕ್ರಯ ಪತ್ರ ಮಾಡಿಕೊಳ್ಳದೇ ಇರುವ ಕಾರಣ, ಸದರಿ ನಿಪಿ-3 ರ ದಾಖಲೆ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಕರಾರು ಉಲ್ಲಂಘನೆ ಮಾಡಿದ್ದರಿಂದ ನನಗೆ ಹಣ ವಾಪಸ್ ಕೊಡುವ ಪ್ರಮಯೇ ಬರುವುದಿಲ್ಲ ಹಾಗೂ ನೋಂದ ಕ್ರಯ ಪತ್ರ ಮಾಡಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಮೂನೆ-11 ಇ ಆದ ನಂತರ ನೋಂದ ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದು ನಿಪಿ-3 ರಲ್ಲಿ ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಿಪಿ-3 ಆಗುವ ಕಾಲಕ್ಕೆ ನಮೂನೆ-10 ಇದ್ದ ಕಾರಣ, ನಮೂನೆ-11 ಇ ನ್ನು ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಸದರಿ 3 ತಿಂಗಳ ಅವಧಿಯಲ್ಲಿ ಸಾಕಷ್ಟು ಬಾರಿ ನನ್ನನ್ನು ಹಣ ಕೇಳಿದ್ದರೂ ಕೂಡಾ ನಾನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಗ ಕೂಡಾ ಸಾಕಷ್ಟು ಬಾರಿ ಫೋನ್ ಮಾಡಿ, ವಾಟ್ಸ್ ಆ್ಯಪ್ ಕಳುವುಹಿಸಿದ್ದರೂ ಕೂಡಾ, ನಾನು ಅದಕ್ಕೆ ಇನ್‌ಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ನೋಂದ ಮಾಡಿಕೊಳ್ಳಲು ಮುಂದೂಡತ್ತಾ ಬಂದಿರುತ್ತೇನೆ ಹಾಗೂ 1 ನೇ ಪ್ರತಿವಾದಿಗೆ ಗಂಡನಿಗೆ ನಾನು ಹಣ ಕೊಡದೇ ಇರುವ ಕಾರಣ, ಸರಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನಿಗಧಿತ ಅವಧಿಯಲ್ಲಿ ಸರಿಯಾಗಿ ಹಣ ಕೊಡದೇ ಇರುವ

ಕಾರಣ, 1 ನೇ ಪ್ರತಿವಾದಿ ಬೇರೆಯವರಿಂದ ಹಣ ತಂದು, ತನ್ನ ಗಂಡನಿಗೆ ಚಿಕಿತ್ಸೆ ಕೊಡಿಸಿರುತ್ತಾಳೆ ಎಂದರೆ ಸರಿಯಲ್ಲ.

ಅದೇ ರೀತಿ 2 ನೇ ಪ್ರತಿವಾದಿ ಕೂಡಾ ನನಗೆ ಸಾಕಷ್ಟು ಬಾರಿ ನೋಂದಣಿ ಮಾಡಿಕೊಳ್ಳಿ ಎಂದು ಹೇಳಿದ್ದರು ಕೂಡಾ ನಾನು ಅವರ ಮಾತನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**